ಅ) ರಾಜ್ಯದ ಅರಣ್ಯ ಇಲಾಖೆಯಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವರ್ಗಾವಾರು ವಿವರ ನೀಡುವುದು);

ಆ) ವಲಯ ಅರಣ್ಯಾಧಿಕಾರಿಗಳ ಸಂಖ್ಯೆ ಎಷ್ಟು;

ಇ) ಸ್ಥಳೀಯ ಅರಣ್ಯ ಬೆಳೆಸುವ ಹೊಣೆಗಾರಿಕೆ ನಿರ್ವಹಿಸಲು ಇರುವ ಸಿಬ್ಬಂದಿಗಳು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಎ ವರ್ಗ - 355

ಬಿ ವರ್ಗ - 867

ಸಿವರ್ಗ - 8069

ಡಿ ವರ್ಗ - 2144

ಆ) 729

ಇ) ಬಂದಿದೆ.

ಈ) ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು: ಮಂಡಿಸಲಾಯಿತು.

2(i) **ಅಧ್ಯಕ್ಷರ ಅಪ್ಪಣೆ ಮೇರೆಗೆ ತೆಗೆದುಕೊಂಡ ವಿಷಯಗಳು.**

ಸಿಂಧನೂರು ತಾಲ್ಲೂಕಿನಲ್ಲಿ ಕಾಲರಾ ರೋಗದಿಂದ ಜನರಿಗೆ ಉಂಟಾಗಿರುವ ತೊಂದರೆಯ ಬಗ್ಗೆ:

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಸಿಂಧನೂರು ತಾಲ್ಲೂಕಿನಲ್ಲಿ ಹಬ್ಬಿರುವ

ಕಾಲರಾದಿಂದ 22 ಜನ ಸತ್ತಿದ್ದು, ಅಲ್ಲಿ ಬಹಳ ತೊಂದರೆಯಾಗಿದೆ. ಮಾನ್ಯ ಆರೋಗ್ಯ ಸಚಿವರು ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳಬೇಕು. ಅಲ್ಲಿನ ಸ್ಥಳೀಯ ಶಾಸಕರಾದ ಹಂಪನಗೌಡ ಬಾದರ್ಲಿಯವರು ಅದರ ಬಗ್ಗೆ ಒಂದು ನಿಮಿಷ ಮಾತನಾಡುತ್ತಾರೆ. ಅದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು.

ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು): ಮಾನ್ಯ ಅಧ್ಯಕ್ಷರೇ, ಸಿಂಧನೂರು ತಾಲ್ಲೂಕಿನಲ್ಲಿ ಕಳೆದ ೮-೧೦ ದಿನಗಳಿಂದ ಕಾಲರಾ ರೋಗ ಹಬ್ಬಿದ್ದು ಇದುವರೆಗೆ ಸುಮಾರು ೧೫-೨೦ ಜನ ಮರಣಕ್ಕೆ ಈಡಾಗಿದ್ದಾರೆ. ನಾನೇ ಸ್ವತಃ ಆ ಗ್ರಾಮಕ್ಕೆ ಭೇಟಿ ನೀಡಿದಂಥ ಸಂದರ್ಭದಲ್ಲಿ....

(ಗೊಂದಲ)

ಅಧ್ಯಕ್ಷರು: ಎಲ್ಲರೂ ಒಟ್ಟಿಗೇ ನಿಂತುಕೊಂಡರೆ ಹೇಗೆ? ನಾನು ಹಂಪನಗೌಡರನ್ನು ಕರೆದ್ದಿದ್ದೇನೆ.

(ಗೊಂದಲ)

ಅಧ್ಯಕ್ಷರು:ತಾವು ದಯವಿಟ್ಟು ಕುಳಿತುಕೊಳ್ಳಿ. ಎಲ್ಲರೂ ಏಕೆ ಒಂದೇ ಸಲ ನಿಂತುಕೊಳ್ಳುತ್ತೀರಿ? ತಾವು ಹೇಳುವುದಕ್ಕೂ ಒಂದು ಮಾದರಿ ಇದೆ.

ಅಧ್ಯಕ್ಷರು: ಎಲ್ಲರೂ ಒಂದೇ ಸಲ ಏಕೆ ನಿಂತುಕೊಳ್ಳುತ್ತೀರಿ? ಹೀಗಾದರೆ ನಾನು ಸದನವನ್ನು ನಡೆಸುವುದು ಹೇಗೆ? ಚಂದ್ರೇಗೌಡರೇ ನಿಮ್ಮ ಸದಸ್ಯರಿಗೆ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ: ಸದಸ್ಯರಿಗೆ ಹೇಳಿ ಎಂದು ನನಗೆ ಹೇಳುತ್ತಿದ್ದೀರಿ. ಹಾಗೆಯೇ ಅವರನ್ನೂ ಸಹ ಮಾತನಾಡದೇ ಕುಳಿತುಕೊಳ್ಳಲು ಹೇಳಿ.

ಅಧ್ಯಕ್ಷರು: ಸಿಂಧ್ಯಾರವರೇ ನೀವು ಮಾತನಾಡಿ, ಈಗ ನಾನು ಸಿಂಧ್ಯಾರವರನ್ನು ಕರೆದಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರುಗಳು ಏನು ಹೇಳುತ್ತಿದ್ದಾರೆನ್ನುವುದು ನಮಗಂತೂ ಗೊತ್ತಾಗುತ್ತಿಲ್ಲ. ತಾವು ಕೇಳಿ. ಸಿಂಧನೂರು ತಾಲ್ಲೂಕಿನಲ್ಲಿ ವ್ಯಾಪಕವಾಗಿ ಕಾಲರಾ ರೋಗ ಹರಡುತ್ತಿದೆ. ಹಲವಾರು ಜನರು ಸತ್ತಿದ್ದಾರೆ. ವೈದ್ಯಕೀಯ ಸೌಲಭ್ಯ ಅಲ್ಲಿ ಸಿಗುತ್ತಿಲ್ಲ. ಅಲ್ಲಿ ಕುಡಿಯುವ ನೀರಿಗೂ ಸಹ ತೊಂದರೆಯಾಗುತ್ತಿದೆ. ಕುಡಿಯುವ ನೀರು ಕಲುಷಿತಗೊಂಡಿದೆ. ಇದರ ಬಗ್ಗೆ ಸರ್ಕಾರದಿಂದ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದರ ಬಗ್ಗೆ ಸರ್ಕಾರದಿಂದ ಉತ್ತರ ಬರಬೇಕು. ಸದನದಲ್ಲಿ ಮಾನ್ಯ ಆರೋಗ್ಯ

ಸಚಿವರು ಇದ್ದಾರೆ, ಮಾನ್ಯ ಪೌರಾಡಳಿತ ಸಚಿವರು ಇದ್ದಾರೆ. ದಯವಿಟ್ಟು ಇದರ ಬಗ್ಗೆ ಮಾನ್ಯ ಆರೋಗ್ಯ ಸಚಿವರಿಂದ ಉತ್ತರವನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎನ್.ಸುರೇಶ್ ಕುಮಾರ್: ಮಾನ್ಯ ಸಂಸದೀಯ ಸಚಿವರು ಸಂಸದೀಯ ನಡವಳಿಕೆಗಳನ್ನು ತಿಳಿದುಕೊಂಡಿರುವವರು, ನಮಗೆಲ್ಲ ಬುದ್ಧಿ ಹೇಳುವವರು, ಈಗ ಗಲಾಟೆ ಮಾಡುತ್ತಿರುವ ತಮ್ಮ ಪಕ್ಷದ ಸದಸ್ಯರಿಗೆ ಏಕೆ ಬುದ್ಧಿ ಹೇಳುತ್ತಿಲ್ಲ? ಮಾನ್ಯ ಅಧ್ಯಕ್ಷರು ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಕೊಟ್ಟ ಮೇಲೆ ಇದರ ಮಧ್ಯೆ ಆಡಳಿತ ಪಕ್ಷದ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶವೆಲ್ಲಿರುತ್ತದೆ? ದಯವಿಟ್ಟು ಅವರಿಗೆಲ್ಲ ಬುದ್ಧಿ ಹೇಳಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುವಂತೆ ಹೇಳಿ.

(ಗೊಂದಲ)

(ಈ ಹಂತದಲ್ಲಿ ಜನತಾದಳದ ಮಾನ್ಯ ಸದಸ್ಯರುಗಳು ಧರಣಿ ನಡೆಸಲು ಸದನದ ಬಾವಿಗೆ ಆಗಮಿಸಿದರು)

(ಗೊಂದಲ)

ಅಧ್ಯಕ್ಷರು: ಸದನದಲ್ಲಿ ಹೀಗೆ ತಾವೆಲ್ಲ ವರ್ತಿಸಿದರೆ ಜನರು ಏನೆನ್ನುತ್ತಾರೆ? ದಯವಿಟ್ಟು ತಾವೆಲ್ಲ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ. ಮಾನ್ಯ ಸಿಂಧ್ಯಾರವರೆ, ಅವರವರ ಜಾಗಕ್ಕೆ ಹೋಗಿ ಎಂದು ತಮ್ಮ ಸದಸ್ಯರಿಗೆ ಹೇಳಿ.

(ಗೊಂದಲ)

ಅಧ್ಯಕ್ಷರು: ನೀವು ಹೀಗೆ ಗಲಾಟೆ ಮಾಡುವುದನ್ನು ಜನ ಆಚೆ ನೋಡಿ ಅಸಹ್ಯ ಪಟ್ಟುಕೊಳ್ಳುವುದಿಲ್ಲವೇ? ಇವರು ಯಾವ ರೀತಿ ವರ್ತಿಸುತ್ತಿದ್ದಾರೆ ಎಂದು ನೋಡುವುದಿಲ್ಲವೇ? I am very sorry.

(ಗೊಂದಲ)

ಅಧ್ಯಕ್ಷರು: ಸಭೆ ನಡೆಯುವುದಕ್ಕೆ ಹಲವಾರು ಮಾನ್ಯ ಸದಸ್ಯರುಗಳು ಅಡಚಣೆ ಉಂಟುಮಾಡುತ್ತಿರುವುದರಿಂದ ಈಗ ಸಭೆಯನ್ನು ಮುಂದೂಡಿ ಪುನಃ ಮಧ್ಯಾಹ್ನ ೩-೦೦ ಗಂಟೆಗೆ ಸಭೆ ಸೇರಲಾಗುವುದು.

(ಸಭೆಯನ್ನು ಮಧ್ಯಾಹ್ನ 12-55 ಗಂಟೆಗೆ ಮುಂದೂಡಿ ಪುನಃ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ ಮೂರು ಗಂಟೆ ಎಂಟು ನಿಮಿಷಕ್ಕೆ ಪ್ರಾರಂಭವಾದಾಗ, ಸಭಾಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪನವರು ಪೀಠವನ್ನಲಂಕರಿಸಿದ್ದರು)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸನ್ಮಾನ್ಯ ಸಭಾಧ್ಯಕ್ಷರೆ, ಬೆಳಿಗ್ಗೆ ನಡೆದ ಅಧಿವೇಶನದಲ್ಲಿ ಶೂನ್ಯವೇಳೆಯ ಸಂದರ್ಭದಲ್ಲಿ ಸಿಂಧನೂರು ತಾಲ್ಲೂಕಿನ.....

ಶ್ರೀ ವಿ.ಜಯಕುಮಾರ ಶೆಟ್ಟಿ: ಮೊನ್ನೆ ತಾವು ಸದನದ ಕಲಾಪವನ್ನು ಪ್ರಾರಂಭಿಸಬೇಕೆಂದು ಹೇಳಿದ್ದಿರಿ. ಅದಕ್ಕೆ ನಾವು ಗೌರವ ಕೊಟ್ಟು ಕುಳಿತಿದ್ದೇವೆ.

ಅಧ್ಯಕ್ಷರು: ಅವರು ಮಾತನಾಡಲು ಪ್ರಾರಂಭಿಸಿದ್ದಾರೆ. ಅವರೇನು ಹೇಳುತ್ತಾರೋ ನೋಡೋಣ. I have allowed Mr.Sindhia to speak.

(ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯರು ಮತ್ತು ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡಲು ಆರಂಭಿಸಿದರು)

ಅಧ್ಯಕ್ಷರು: ಸಿಂಧ್ಯರವರಿಗೆ ಮಾತನಾಡಲು ಅಲೋ ಮಾಡಿದ್ದೇನೆ. ಸಿಂಧ್ಯರವರು ಮಾತನಾಡಿದ್ದನ್ನು ಮಾತ್ರ ಬರೆದುಕೊಳ್ಳಿ. ಬೇರೆಯವರು ಮಾತನಾಡಿದ್ದನ್ನು ಬರೆದುಕೊಳ್ಳಬೇಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರೇ ತಾವು ಮಾತನಾಡಿ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್: ಸುಮ್ಮಸುಮ್ಮನೆ ಆಡಳಿತ ಪಕ್ಷದ ಸದಸ್ಯರುಗಳು ಕ್ಯಾತೆ ತೆಗೆಯುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್: ಬೆಳಿಗ್ಗೆ ಎಲ್ಲಾ ಹಿರಿಯ ಸಚಿವರುಗಳು ಸದನದಲ್ಲಿದ್ದರು, ಅವರ ಸಮ್ಮುಖದಲ್ಲಿ ಇದೆಲ್ಲಾ ನಡೆಯಿತು. ಅವರು ನೀವೆಲ್ಲರೂ ಹೋಗಿ ಗಲಾಟೆ ಮಾಡಿ ಎಂದು [xxx]

[xxx] ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಬಿ.ರಮಾನಾಥ್‌ರೈ(ಬಂದರು ಹಾಗೂ ಮೀನುಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿರುವ ಪದ ಅನ್‌ಪಾರ್ಲಿಮೆಂಟರಿ ವರ್ಡ್ ಆಗುತ್ತದೆ. ಆ ಪದವನ್ನು ಕಡತದಿಂದ ತೆಗೆಸಿ ಹಾಕಬೇಕು.

MR.SPEAKER: That is not a parliamentary word.

(ಗೊಂದಲ)

MR.SPEAKER: I have rejected the calling attention ಮಾನ್ಯ ಜಗದೀಶ್‌ಶೆಟ್ಟರ್‌ರವರೆ, ರಿಜೆಕ್ಟ್ ಮಾಡಿರುವ ಲೆಟರ್‌ಗಳನ್ನು ಕೊಟ್ಟು ಕಳುಹಿಸಿದ್ದೇವೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ವೆಂಕಟರಮಣಪ್ಪನವರೆ, ತಾವು ದಯಮಾಡಿ ಕುಳಿತುಕೊಳ್ಳಿ, ಇದೆಲ್ಲಾ ಏನು? ನಾವು ಎಲ್ಲಿದ್ದೇವೆ ಏನು ಎಂಬುದನ್ನು ಆಲೋಚನೆಯನ್ನು ನೀವು ಮಾಡುತ್ತಿದ್ದೀರಾ? ಹೊರಗಡೆಯಿರುವ ಜನತೆಯು ಏನು ಎಂದು ತಿಳಿದುಕೊಳ್ಳುತ್ತಾರೆ. xxx

ಶ್ರೀ ಬಿ.ಸೋಮಶೇಖರ್: ಸಂವಿಧಾನಬದ್ದವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದರಿಂದ, ತಾವು ಕೊಡಿ.

ಅಧ್ಯಕ್ಷರು: ಅವಕಾಶವಿಲ್ಲ.

ಶ್ರೀ ಬಿ.ಸೋಮಶೇಖರ್: ಸಿಂಧನೂರಿನಲ್ಲಿ ಕಾಲರಾ ರೋಗದಿಂದ ೨೬ ಜನ ಸತ್ತಿದ್ದಾರೆ, ಶೂನ್ಯವೇಳೆಯಲ್ಲಿ ಆ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ತಾವು ಅವಕಾಶವನ್ನು ಕೊಟ್ಟಿದ್ದರೂ ಸಹ ಆಡಳಿತ ಪಕ್ಷದ ಸದಸ್ಯರು ತಮ್ಮ ಮಾತಿಗೆ ಬೆಲೆಯನ್ನು ಕೊಡದೆ ಇರುವ ಸದಸ್ಯರ ಮೇಲೆ ತಾವು ಕ್ರಮವನ್ನು ಕೈಗೊಳ್ಳಬೇಕು. ಸಿಂಧನೂರಿನಲ್ಲಿ ಆಗಿರತಕ್ಕಂತಹ ಇಂತಹ ಘಟನೆ ಇಡೀ ರಾಜ್ಯದಲ್ಲಿ ಎಲ್ಲೂ ಆಗಿರುವುದಿಲ್ಲ. ಸಂವಿಧಾನಬದ್ಧವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದರಿಂದ ಚರ್ಚೆ ಮಾಡುವುದಕ್ಕೆ ತಾವು ಅವಕಾಶನ್ನು ಕೊಡಿ.

(ಗೊಂದಲ)

---

xxx ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.